
# ಬೆಸುಗೆ ಬಿಡುತ್ತಿರುವ ಸಂಬಂಧಗಳು!

★ ರಾಜೀವ ಎನ್. ಮಾಗಲ್

ಇತ್ತೀಚೆಗೆ ಕೃಷಿ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸಿದಾಗ ಬಹುತೇಕ ರೈತಾಪಿ ವರ್ಗದವರು ಅನೇಕ ಸಮಸ್ಯೆಗಳನ್ನು ಬದಿಗಿಟ್ಟು, ವ್ಯವಸಾಯಗಾರರನ್ನು ಗುರುತರವಾಗಿ ಕಾಡುತ್ತಿರುವ ಕಾರ್ಮಿಕರ ಕೊರತೆಯ ಬಗ್ಗೆ ಹೆಚ್ಚಾಗಿ ಪ್ರಸ್ತಾಪ ಮಾಡಿದ್ದು ಆಶ್ಚರ್ಯವಾಗದೇ ಇದ್ದರೂ, ಅದರ ಸಾಧಕ ಬಾಧಕಗಳ ಬಗ್ಗೆ ಆಲೋಚಿಸಲು ಒಂದು ವೇದಿಕೆಯಾಯಿತು. ಈ ಸಮಾವೇಶದಲ್ಲಿ ಬಹುತೇಕ ಮಂದಿ ಯುವಕರು ಪಾಲ್ಗೊಂಡಿದ್ದರೂ, ಇಳಿವಯಸ್ಸಿನ ಅನೇಕ ಹಿರಿಯರು ಆಡಿದ ಮಾತುಗಳು ಮನಮುಟ್ಟುವಂತಿದ್ದವು. ಅವರ ಮಾತುಗಳಲ್ಲಿ ನೈಜತೆ ಕಾಣುತ್ತಿತ್ತು. ಅವರ ಮಾತುಗಳು ಆಧುನಿಕ ಜೀವನದತ್ತ ದಾಪುಗಾಲು ಹಾಕುತ್ತಿರುವ ಇಂದಿನ ಯುವಕರಿಗೆ ಎಚ್ಚರಿಕೆಯ ಗಂಟೆಯೆಂದು ಪರಿಗಣಿಸುವಂತಿತ್ತು. ಆದರೆ, ಹಿರಿಯರ ಮಾತುಗಳನ್ನು ಗಂಭೀರವಾಗಿ ಕೇಳಿಸಿಕೊಂಡವರನ್ನು ಗುರುತಿಸುವುದು ಸುಲಭದ ಮಾತಲ್ಲ.



ಚಿತ್ರ: ವಿಜಯ

ಸುಮಾರು ನಾಲ್ಕೈದು ದಶಕಗಳ ಹಿಂದೆ ಕೂಡು ಕುಟುಂಬಗಳು ಸರ್ವೇ ಸಾಧಾರಣವಾಗಿದ್ದವು. ಗ್ರಾಮೀಣ ಭಾಗದಲ್ಲಿ ಬಹುತೇಕ ಕುಟುಂಬಗಳ ಕಸುಬು ವ್ಯವಸಾಯವಾಗಿತ್ತು; ಹೆಣ್ಣು – ಗಂಡೆಂಬ ಬೇಧವಿಲ್ಲದೇ ಮನೆಮಂದಿಯೆಲ್ಲ ಮೂಲ ಕಸುಬಾದ ಒಕ್ಕಲುತನದಲ್ಲಿ, ಒಂದಲ್ಲ ಒಂದು ರೀತಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಮನೆಯ ಒಡೆಯ ಅತ್ಯಂತ ಯಶಸ್ವಿಯಾಗಿ ತನ್ನ ಕಸುಬನ್ನು ಹಾಗೂ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುವ ಸಾಮರ್ಥ್ಯ ಉಳ್ಳವನಾಗಿದ್ದ; ಆತನ ಮಾತುಗಳನ್ನು, ಆತನ ನಿರ್ಧಾರಗಳನ್ನು ಮನೆಮಂದಿಯೆಲ್ಲ ಗೌರವ – ನಿಷ್ಠೆಯಿಂದ ಪಾಲಿಸುತ್ತಿದ್ದರು. ಮನೆಯೊಡೆಯನೂ ಸಹ ಆ ಗೌರವಕ್ಕೆ ಅರ್ಹನಾಗುವಂತೆ ನಡೆದುಕೊಳ್ಳುವವನಾಗಿದ್ದ; ಎರಡು ತುತ್ತು ಅನ್ನ ನೀಡುವ ಕಸುಬಿಗೆ ಅಂದು ಹೆಚ್ಚಿನ ಪ್ರಾಧಾನ್ಯತೆ ಇತ್ತು. ವಿದ್ಯಾಭ್ಯಾಸಕ್ಕೆ ಆದ್ಯತೆ ಕಡಿಮೆಯೆಂದೇ ಹೇಳಬಹುದು; ಮನೆಯಲ್ಲಿ ಹೆಚ್ಚು ಮಂದಿ ಇದ್ದಷ್ಟೂ ಒಕ್ಕಲುತನದಲ್ಲಿ ಒಲವು ಹೆಚ್ಚುತ್ತಿತ್ತು; ಎಲ್ಲ ಬಗೆಯ ಕೆಲಸಗಳನ್ನು ಅವರವರೇ ಹಂಚಿಕೊಂಡು ನಿಭಾಯಿಸುತ್ತಿದ್ದರು; ಒಟ್ಟಿನಲ್ಲಿ ಹೇಳಬೇಕೆಂದರೆ, ಮನೆಮಂದಿಗೆಲ್ಲ ದುಡಿಯಲು ಅವಕಾಶವಿತ್ತು. ಸಂತೋಷದಿಂದ, ಪರಸ್ಪರ ಹೊಂದಾಣಿಕೆಯಿಂದ ಜೀವನ ನಡೆಸುವಲ್ಲಿ ಶ್ರಮಿಸುತ್ತಿದ್ದರು. ಶ್ರಮಕ್ಕೆ ಪ್ರತಿಫಲ ನೆಮ್ಮದಿಯ ಜೀವನವಾಗಿತ್ತು. ಉತ್ತಮ ಆರೋಗ್ಯವಾಗಿತ್ತು. ಬಾಂಧವ್ಯವೆಂಬುದು ಕಣ್ಣಿಗೆ ಕಾಣುವ ಬೆಸುಗೆಯಾಗಿತ್ತು. ಬೇಕುಗಳು ಕಡಿಮೆಯಿದ್ದವು. ಪಾಲಿಗೆ ಬಂದದ್ದು ಪಂಚಾಮೃತವೆಂಬಂತೆ ತೃಪ್ತಿಯ ಜೀವನ ಅವರದಾಗಿತ್ತು.

ಆದರೆ, ಇಂದು, ಜೀವನ ಶೈಲಿಯಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಕೂಡು ಕುಟುಂಬಗಳು ಬಹುತೇಕ ಮಾಯವಾಗಿವೆ – ಬೆರಳೆಣಿಕೆಯಷ್ಟು ಇರುವ ಅವಿಭಕ್ತ ಕುಟುಂಬಗಳು ಸಹ ವಿಭಜನೆಯಾಗುವ ಅಂತಿಮ ಹಂತವನ್ನು ತಲುಪಿವೆ. ಗ್ರಾಮೀಣ ಭಾಗದಲ್ಲಿ ಶ್ರಮವಹಿಸಿ ದುಡಿಯುವ ಕೈಗಳನ್ನು ಹುಡುಕಬೇಕಾಗಿದೆ; ಕುಟುಂಬಗಳು ಚಿಕ್ಕದಾಗುತ್ತಿವೆ. ಬಹುತೇಕ ಕುಟುಂಬಗಳಲ್ಲಿ ಒಂದೇ ಮಗುವನ್ನು ಕಾಣುತ್ತೇವೆ. ಗಂಡಾಗಲಿ – ಹೆಣ್ಣಾಗಲಿ; ಆಧುನಿಕ ಜೀವನ ಶೈಲಿಯನ್ನು ಅರಸಿ ಹೊರಟ ಇಂದಿನ ಜನಾಂಗ, ನೆಮ್ಮದಿಯ ಬದುಕಿಗೆ ಕೇವಲ ಹೆಚ್ಚಿನ ಹಣ ಸಂಪಾದನೆಯಿಂದಲೇ ಪರಿಹಾರವೆಂಬಂತೆ ಪೈಪೋಟಿಯಲ್ಲಿ ತೊಡಗಿದ್ದಾರೆ.

ಓರ್ವ ವ್ಯಕ್ತಿಯನ್ನು ಅಳೆಯಲು ಮೂಲ ಮಾನದಂಡ ಆತನ ಹಣಕಾಸಿನ ಬಲವೇ ಆಗಿದೆ; ಪ್ರಾಮಾಣಿಕವಾದ ದುಡಿಮೆಗೆ ಬೆಲೆ ಕಡಿಮೆಯಾಗುತ್ತದೆ. ಈ ಕಾರಣದಿಂದಲೇ ಅಡ್ಡ ಕಸುಬಿನಿಂದ ಹಣ, ಸಂಪಾದಿಸುವಲ್ಲಿ ಹಲವಾರು ಮಂದಿ ಆಲೋಚಿಸುತ್ತಿದ್ದಾರೆ. ಭ್ರಷ್ಟಾಚಾರಕ್ಕೂ ಸಹ ಮೂಲ ಕಾರಣ ಇದೇ! ಬಹುತೇಕ ಮಂದಿ ರಾತ್ರೋ ರಾತ್ರಿ ಕುಬೇರರಾಗುವಲ್ಲಿ ಕೂಡ ಯಶಸ್ವಿಯಾಗಿದ್ದಾರೆ; ಹಣ ಗಳಿಕೆಯಲ್ಲಿ ಮಗ್ನರಾಗಿರುವ ಜನಗಳಿಗಿರುವ ಏಕೈಕ ಗುರಿ, ಸಂಪಾದನೆಯೇ ವಿನಹ ಅದನ್ನು ಮುಟ್ಟುವ ದಾರಿಯಲ್ಲ; ಪ್ರಸ್ತುತ, ಹಣಬಲವೊಂದಿದ್ದರೆ ಮಾತ್ರ ಸಮಾಜದಲ್ಲಿ ಅಂತಸ್ತು, ಗೌರವ ಎಂಬ ಕಾರಣಕ್ಕೆ ಸ್ನೇಹಿತರು, ಬಂಧು – ಬಾಂಧವರು ಕೂಡ ಕಣ್ಣಿಗೆ ಬೀಳುತ್ತಿಲ್ಲ; ಈ ಹಿಂದೆ, ಹಬ್ಬ ಹರಿದಿನಗಳ ಆಚರಣೆಯಲ್ಲಿ, ಕೌಟುಂಬಿಕ ಸಮಾರಂಭಗಳಲ್ಲಿ, ರಜಾ ದಿನಗಳಲ್ಲಿ ಕುಟುಂಬದ ಬಹುತೇಕ ಸದಸ್ಯರು ಆಚರಣೆಯ ನೆಪದಲ್ಲಿ ಒಟ್ಟಾಗಿ, ಒಂದು ಕಡೆ ಇಷ್ಟಪಟ್ಟು ಸೇರುವ ಪದ್ಧತಿಯೊಂದಿತ್ತು. ನೆಂಟರಿಷ್ಟರ ಮನೆಗೂ ಪರಸ್ಪರ ಭೇಟಿ ನೀಡುವ ಪದ್ಧತಿ ಜಾರಿಯಲ್ಲಿತ್ತು; ಮನೆಗೆ ಬಂದ ನೆಂಟರಿಗೆ ತಾವು ಖರೀದಿಸಿದ ನೂತನ ಬಟ್ಟೆ – ಬರೆ, ಒಡವೆಯಿಂದ ಹಿಡಿದು ಚಿಕ್ಕ – ಪುಟ್ಟ ವಸ್ತುಗಳನ್ನು ತೋರಿಸಿ ವಿಜೃಂಭಿಸುವ, ಹೆಮ್ಮೆ ಪಡುವ ಸಂಪ್ರದಾಯವಿತ್ತು; ಆದರೆ, ಇಂದು ಖರೀದಿಸಿದ ವಸ್ತುಗಳನ್ನು ತೋರಿಸುವುದಿರಲಿ, ಅದರ ಬಗ್ಗೆ ಪ್ರಸ್ತಾಪ ಮಾಡುವುದೂ ವಿರಳವಾಗಿದೆ; ಒಂದು ವೇಳೆ ತೋರಿಸಲೇಬೇಕಾದ ಪ್ರಸಂಗ ಬಂದರೆ, ಕೇವಲ ಶಿಷ್ಟಾಚಾರಕ್ಕೆ ಮಾತ್ರವೆಂಬಂತಾಗಿದೆ.

ಮನೆಯಲ್ಲಿನ ಮಕ್ಕಳು ಕೂಡ ಮನೆಗೆ ಬಂದ ಅತಿಥಿಗಳಿಗೆ ನೀಡುವ ಗೌರವ ಕೇವಲ ಕಾಟಾಚಾರಕ್ಕೆ ಎಂಬಂತಾಗಿದೆ. ಪೋಷಕರಿಗೂ ತಮ್ಮ ಮಕ್ಕಳನ್ನು ಉತ್ತಮ ಪ್ರಜೆಗಳಾಗಿ ಬೆಳೆಸುವ ಬಗ್ಗೆ, ಅವರಿಗೆ ಸಂಸ್ಕಾರ ನೀಡುವ ವಿಚಾರದಲ್ಲಿ ಹೆಚ್ಚಿನ ಆಲೋಚನೆ ಇದ್ದಂತೆ ಕಾಣದು!

ಆಧುನಿಕ ಯುಗದಲ್ಲಿ ಯಾರೊಬ್ಬರಿಗೂ ಬಾಂಧವ್ಯದ ಬಗ್ಗೆ ಒಲವು, ವ್ಯಾಮೋಹವೇ ಇಲ್ಲವಾಗಿದೆ. ಬಾಂಧವ್ಯ ಸಹ ಖರೀದಿಗೆ ಲಭ್ಯವಾಗಿರುವ ವಸ್ತುವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಒಬ್ಬರನ್ನೊಬ್ಬರು ಭೇಟಿಯಾಗುವುದಿರಲಿ, ದೂರವಾಣಿಯ ಮೂಲಕ ಕೂಡ ಉಭಯ ಕುಶಲೋಪರಿ ತಿಳಿಯುವ ಬಗ್ಗೆ ಪುರುಸೊತ್ತಿಲ್ಲ. ಎಲ್ಲವೂ 'ವಾಟ್ಸಪ್' ಮುಖೇನವೇ! ಅವಿಭಕ್ತ ಕುಟುಂಬಗಳಿಲ್ಲದಿದ್ದರೇನು, ಇರುವ ಚಿಕ್ಕ ಕುಟುಂಬದ ಸದಸ್ಯರೊಟ್ಟಿಗಿನ ಬೆಸುಗೆಯೂ ಬರುಬರುತ್ತ ಕಡಿದು ಹೋಗುತ್ತಿದೆ! ಈ ಬೆಳವಣಿಗೆ ಇದೇ ರೀತಿ ಮುಂದುವರೆಯುವ ಸಾಧ್ಯತೆಗಳು ಹೆಚ್ಚಾಗಿ ಕಾಣುತ್ತಿದ್ದು, ಮುಂದೊಂದು ದಿನ, ಹಿಂದೆ ನಮ್ಮ ಪೂರ್ವಜರು ಬರೆದಿಟ್ಟಿದ್ದ ವಂಶವೃಕ್ಷ, ಕೇವಲ ಆಸ್ತಿ ವಿಭಜನೆಗೆ ಬೇಕಾದ ಅವಶ್ಯವಾದ ಕಾನೂನಾತ್ಮಕ ದಾಖಲೆಯಾಗುತ್ತದೆಯೇ ಹೊರತು ಅದರಲ್ಲಿನ ಸಂಬಂಧಗಳಿಗೆ, ನೆಂಟಸ್ಥನಕ್ಕೆ ಮಾನ್ಯತೆ ಸಿಕ್ಕುವುದು ಅನುಮಾನವೇ. ಬದುಕಲಿಕ್ಕೆ 'ಆಸ್ತಿಗಿಂತ ಸಂಸ್ಕೃತಿ ಮುಖ್ಯ' ಎಂಬ ಗಾದೆಯನ್ನು ನಮ್ಮ ಪೂರ್ವಜರು ಇಂದಿನ ಆಧುನಿಕ ಕಾಲವನ್ನು ಮನದಲ್ಲಿಟ್ಟುಕೊಂಡೇ ನಿರೂಪಿಸಿದ್ದು ಎನ್ನುವುದರಲ್ಲಿ ಅನುಮಾನವಿಲ್ಲ.